ಆ) ಹಣಕಾಸಿನ ಲಭ್ಯತೆ ಆಧಾರದ ಮೇಲೆ ಅದರಗುಂಚಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಹೊಸದಾಗಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಪ್ರಾರಂಭಿಸುವುದು

217 (371) ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಆಯವ್ಯಯದಲ್ಲಿ ಹೊಸದಾಗಿ ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜು ಪ್ರಾರಂಭಿಸಲು ನಿಗದಿಪಡಿಸಿದ ಹಣವೆಷ್ಟು; (ವಿವರ ನೀಡುವುದು)

(ಆ) 2012–13ನೇ ಸಾಲಿನಲ್ಲಿ ಹೊಸದಾಗಿ ಪ್ರೌಢ ಶಾಲೆ/ಪದವಿಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

(ಇ) ಹಾಗಿದ್ದಲ್ಲಿ, ಸೇಡಂ ತಾಲ್ಲೂಕು ಹಾಗೂ ಸೇಡಂ ತಾಲ್ಲೂಕಿನ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು; (ವಿವರ ನೀಡುವುದು) ಹೊಸದಾಗಿ ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳು ಯಾವುವು? (ವಿವರ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಆರ್.ಎಂ.ಎಸ್.ಎ ಅಡಿಯಲ್ಲಿ ಹೊಸದಾಗಿ 138 ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಒಟ್ಟು ರೂ. 11125.56 ಲಕ್ಷಗಳಿಗೆ ಆಯವ್ಯಯ ಸಿದ್ಧಪಡಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಅನುದಾನದ ಲಭ್ಯತೆ ಇಲ್ಲ.

ಆ) 2012–13ನೇ ಸಾಲಿಗೆ ರಾಜ್ಯದ ಅನುದಾನದಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

(ಇ) ಆರ್.ಎಂ.ಎಸ್.ಎ ಅಡಿಯಲ್ಲಿ 2012–13ನೇ ಸಾಲಿಗೆ ಸೇಡಂ ತಾಲ್ಲೂಕಿನಲ್ಲಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ರಹಮತ್‌ನಗರ ವನ್ನು ಉನ್ನತೀಕರಿಸಲು ಉಪನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿದ್ದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2012–13ನೇ ಸಾಲಿಗೆ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2012–13ನೇ ಸಾಲಿಗೆ ಉನ್ನತೀಕರಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವ ಸಂಖ್ಯೆ
1	ಬಾಗಲಕೋಟೆ	8
2	ಬೆಂಗಳೂರು ಗ್ರಾಮಾಂತರ	6
3	ಬೆಂಗಳೂರು ಉತ್ತರ	1
4	ಬೆಂಗಳೂರು ದಕ್ಷಿಣ	4
5	ಬೆಳಗಾವಿ	5
6	ಚಿಕ್ಕೋಡಿ	5
7	ಬಳ್ಳಾರಿ	2
8	ಬೀದರ್	2
9	ಬಿಜಾಪುರ	4
10	ಚಾಮರಾಜನಗರ	0
11	ಚಿಕ್ಕಬಳ್ಳಾಪುರ	0
12	ಚಿಕ್ಕಮಗಳೂರು	1
13	ಚಿತ್ರದುರ್ಗ	3
14	ದಕ್ಷಿಣ ಕನ್ನಡ	3
15	ದಾವಣಗೆರೆ	4
16	ಧಾರವಾಡ	16
17	ಗದಗ	6
18	ಗುಲ್ಬರ್ಗಾ	9
19	ಹಾಸನ	0
20	ಹಾವೇರಿ	6
21	ಕೊಡಗು	0
22	ಕೋಲಾರ	4
23	ಕೊಪ್ಪಳ	7
24	ಮಂಡ್ಯ	0
25	ಮೈಸೂರು	12
26	ರಾಮನಗರ	0
27	ರಾಯಚೂರು	10
28	ಶಿವಮೊಗ್ಗ	0
29	ಮಧುಗಿರಿ	0
30	ತುಮಕೂರು	0
31	ಉಡುಪಿ	2
32	ಶಿರಸಿ	2
33	ಉತ್ತರಕನ್ನಡ	4
34	ಯಾದಗಿರಿ	12
		138